S

DIS no 9773/2023
08-12-2023

# ಉಡುಪಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ

ಅಧಿಸೂಚನೆ ಸಂಖ್ಯೆ: ಎಸಿಎಸ್‌:ಹೆಚ್‌ಎಲ್ ಜಿ (01/23-24)

ದಿನಾಂಕ: 07-12-2023.

ವಿಷಯ: 2023-24ನೇ ಸಾಲಿಗೆ ಉಡುಪಿ ಜಿಲ್ಲೆಯ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ಮಂಜೂರು ಮಾಡುವ ಕುರಿತು-

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ ಲಾ-ಎಲ್‌ಎಡಿ/478/2023 ಬೆಂಗಳೂರು ದಿ: 01-12-2023.

******

2023-24ನೇ ಸಾಲಿಗೆ ನವಕಾನೂನು ಪದವೀಧರರಿಗೆ ಮಾಹೆಗೆ ರೂ. 2000/- ರಂತೆ ಪ್ರೋತ್ಸಾಹಧನವನ್ನು ವಿತರಿಸುವ ಕುರಿತು ಈ ಕೆಳಗೆ ನಮೂದಿಸಿದ ಶರತ್ತುಗೊಳಪಟ್ಟು ಈ ಅಧಿಸೂಚನೆ ಜೊತೆಗೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ಅರ್ಹ ಅಭ್ಯರ್ಥಿ ಗಳಿಂದ ಅರ್ಜಿಗಳನ್ನು ಆಹ್ವಾನಿಸ ಲಾಗಿದೆ.

ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: **13-12-2023.**

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **12-01-2024**, ಸಂಜೆ **5-00** ಘಂಟೆ.

ಅರ್ಜಿ ಸಲ್ಲಿಸಬೇಕಾದ ವಿಳಾಸ:- ಪ್ರಧಾನ ಜಿಲ್ಲಾ ನ್ಯಾಯಾಧೀಶರು/ಅಧ್ಯಕ್ಷರು,
ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನದ ಅನುದಾನವನ್ನು
ಬಿಡುಗಡೆ ಮಾಡುವ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ, ಉಡುಪಿ

ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳಿಗೆ ಸೂಚನೆಗಳು:

1. ಈ ಯೋಜನೆಯು 2023-2024ನೇ ಸಾಲಿನದ್ದಾಗಿ ಅನುಷ್ಠಾನಗೊಳ್ಳುತ್ತಿದ್ದು, ಯೋಜನೆಯಡಿ ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಡಿಯಲ್ಲಿ ದಿನಾಂಕ 01-06-2022 ರಿಂದ 31-05-2023ರ ವರೆಗಿನ ಅವಧಿಯಲ್ಲಿ ವಕೀಲ ವೃತ್ತಿಗೆ ನೊಂದಾಯಿಸಿರತಕ್ಕದ್ದು.
2. ಈ ಯೋಜನೆಯಡಿಯಲ್ಲಿ ಪ್ರೋತ್ಸಾಹಧನದ ಮೊತ್ತ ಪ್ರತಿ ಮಾಹೆಗೆ ರೂ. 2000/- (ರೂ. ಎರಡು ಸಾವಿರಗಳು ಮಾತ್ರ) ಒಟ್ಟು 24 ತಿಂಗಳ ಅವಧಿಗೆ ಸೀಮಿತವಾಗಿರತಕ್ಕದ್ದು.
3. ಸರ್ಕಾರಿ, ಅರೆ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ ವಯೋನಿವೃತ್ತಿ, ಕಡ್ಡಾಯ ನಿವೃತ್ತಿ ಮತ್ತು ಸ್ವ-ಇಚ್ಛಾ ನಿವೃತ್ತಿ ಹೊಂದಿದ ನಂತರ ವಕೀಲ ವೃತ್ತಿ ನಡೆಸಲು ಇಚ್ಛಿಸುವ ಕಾನೂನು ಪದವೀಧರರಿಗೆ ಈ ಯೋಜನೆ ಅನ್ವಯವಾಗತಕ್ಕದ್ದಲ್ಲ ಮತ್ತು ಅಂತಹ ಯಾವುದೇ ಸೇವೆಯಿಂದ ತೆಗೆದುಹಾಕಲ್ಪಟ್ಟ ಕಾನೂನು ಪದವೀಧರರಿಗೆ ಸಹ ಅನ್ವಯವಾಗತಕ್ಕದ್ದಲ್ಲ.
4. ಈ ಯೋಜನೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯ/ಕುಟುಂಬದ ವಾರ್ಷಿಕ ವರಮಾನದ ಮಿತಿಯು ರೂ. 40,000/- (ನಲವತ್ತು ಸಾವಿರ ರೂಪಾಯಿಗಳು)ಗಳನ್ನು ಮೀರ ತಕ್ಕದ್ದಲ್ಲ.
5. ಇಂತಹದೇ ಸೌಲಭ್ಯವನ್ನು ಈ ಯೋಜನೆ/ಇತರೆ ಯೋಜನೆಯಡಿ ಅಥವಾ ರಾಜ್ಯ ಸರ್ಕಾರದ ಬೇರೆ ಯಾವುದೇ ಇಲಾಖೆಯ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಈ ಯೋಜನೆಯ ಸೌಲಭ್ಯಗಳಿಗೆ ಅರ್ಹರಾಗತಕ್ಕದ್ದಲ್ಲ.
6. ಈ ಯೋಜನೆಯ ಫಲಾನುಭವಿಗಳಾಗಿ ಆಯ್ಕೆ ಆಗಲು ಇಚ್ಛಿಸುವ ಹೊಸದಾಗಿ ವಕೀಲ ವೃತ್ತಿಯಲ್ಲಿ ತೊಡಗುವ ಕಾನೂನು ಪದವೀಧರರು ರಾಜ್ಯ ಬಾರ್ ಕೌನ್ಸಿಲ್‌ನಲ್ಲಿ ನೋಂದಾಯಿಸಿದ ನಂತರ ಸ್ಥಳೀಯ ವಕೀಲರ ಸಂಘದ ಅಧ್ಯಕ್ಷರಿಂದ ಪ್ರಮಾಣ ಪತ್ರ ಪಡೆದು ಈ ಆಯ್ಕೆ ಸಮಿತಿಯ ಸಂಬಂಧಿತ ತಾಲ್ಲೂಕಿನ ಹಿರಿಯ ಸಿವಿಲ್ ನ್ಯಾಯಾಧೀಶರವರ ಮುಖಾಂತರ ಮತ್ತು ಜಿಲ್ಲಾ ಹಂತದಲ್ಲಿ ನೇರವಾಗಿ ಸಮಿತಿಯ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸತಕ್ಕದ್ದು.

ಪ್ರಧಾನ ಜಿಲ್ಲಾ ನ್ಯಾಯಾಧೀಶರು/ಅಧ್ಯಕ್ಷರು,
ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನದ ಅನುದಾನವನ್ನು
ಬಿಡುಗಡೆ ಮಾಡುವ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ, ಉಡುಪಿ.

PRL. DISTRICT JUDGE
UDUPI

<u>ಪ್ರತಿಯನ್ನು:-</u>

1. ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ
2. ತಹಶೀಲ್ದಾರರು, ಉಡುಪಿ/ಕುಂದಾಪುರ/ಕಾರ್ಕಳ
3. ಜಿಲ್ಲೆಯ ಮತ್ತು ತಾಲೂಕಿನ ಹಿರಿಯ ಶ್ರೇಣಿಯ ನ್ಯಾಯಾಧೀಶರುಗಳಿಗೆ
4. ಅಧ್ಯಕ್ಷರು, ಜಿಲ್ಲಾ ವಕೀಲರ ಸಂಘ, ಉಡುಪಿ
5. ಅಧ್ಯಕ್ಷರು ವಕೀಲರ ಸಂಘ ಕುಂದಾಪುರ/ಕಾರ್ಕಳ
6. ಸರ್ಕಾರಿ ಅಭಿಯೋಜಕರು, ಉಡುಪಿ
7. ಸಹಾಯಕ ಸರ್ಕಾರಿ ಅಭಿಯೋಜಕರು, ಕುಂದಾಪುರ/ಕಾರ್ಕಳ

(1–7) ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ವಿನಂತಿಯೊಂದಿಗೆ

8. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಉಡುಪಿ.
9. ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ
10. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ಉಡುಪಿ ಜಿಲ್ಲೆ, ಉಡುಪಿ - ಇವರಿಗೆ ವ್ಯಾಪಕ ಪ್ರಚಾರಕ್ಕಾಗಿ
11. ಪ್ರಾಂಶುಪಾಲರು, ವೈಕುಂಠ ಬಾಳಿಗಾ ಕಾನೂನು ವಿದ್ಯಾಲಯ, ಉಡುಪಿ.
12. ಜಿಲ್ಲಾ ನ್ಯಾಯಾಲಯದ ಸೂಚನಾ ಫಲಕಕ್ಕೆ.

ಇದರೊಂದಿಗೆ ಸರ್ಕಾರದ ಆದೇಶ ಸಂಖ್ಯೆ ಲಾಎಲ್ಎಡಿ/478/2023 ಬೆಂಗಳೂರು ದಿ: 01-12-2023 ರ ಪ್ರತಿಯನ್ನು ಹಾಗೂ ಅರ್ಜಿ ನಮೂನೆ (ಅನುಬಂಧ-1)ನ್ನು ಕಳುಹಿಸಿಕೊಡಲಾಗಿದೆ.

JR 12104/23
7/12/23

DISTRICT & SESSIONS COURT
ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ
RECEIVED
07 DEC 2023

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: 2023-24ನೇ ಸಾಲಿಗೆ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯನ್ನು ಮುಂದುವರೆಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಲಾ 28 ಎಲ್ಎಡಿ 2006, ದಿನಾಂಕ :11-08-2006
2) ಸರ್ಕಾರದ ಆದೇಶ ಸಂಖ್ಯೆ: ಲಾ 168 ಎಲ್ಎಡಿ 2015, ದಿನಾಂಕ :07-11-2015
3) ಸರ್ಕಾರದ ಆದೇಶ ಸಂಖ್ಯೆ: ಲಾ 68 ಎಲ್ಎಡಿ 2016, ದಿನಾಂಕ :08-09-2016
4) ಸರ್ಕಾರದ ಆದೇಶ ಸಂಖ್ಯೆ: ಲಾ 88 ಎಲ್ಎಡಿ 2017, ದಿನಾಂಕ :22-07-2017
5) ಸರ್ಕಾರದ ಆದೇಶ ಸಂಖ್ಯೆ: ಲಾ 171 ಎಲ್ಎಡಿ 2018, ದಿನಾಂಕ :09-08-2018
6) ಸರ್ಕಾರದಆದೇಶ ಸಂಖ್ಯೆ: ಲಾ 147 ಎಲ್ಎಡಿ 2019, ದಿನಾಂಕ :30-12-2019
7) ಸರ್ಕಾರದ ಆದೇಶ ಸಂಖ್ಯೆ: ಲಾ 204 ಎಲ್ಎಡಿ 2020, ದಿನಾಂಕ : 19-11-2020
8) ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್ಎಡಿ/399/2021, ದಿನಾಂಕ : 23-11-2021
9) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 72 ಪಿಆರ್‌ಜೆ 2022, ದಿನಾಂಕ : 05-07-2022
10) ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್ಎಡಿ/533/2022, ದಿನಾಂಕ : 20-12-2022
11) ಸರ್ಕಾರದ ಆದೇಶ ಸಂಖ್ಯೆ: ಲಾ ಎಲ್ಎಎಂ/40/2023, ದಿನಾಂಕ : 11-04-2023

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ **(1)** ರ ಆದೇಶದಲ್ಲಿ ನವ ಕಾನೂನು ಪದವೀಧರರು ನುರಿತ ಹಿರಿಯ ವಕೀಲರ ಜೊತೆ ವೃತ್ತಿ ಜೀವನ ಪ್ರಾರಂಭ ಮಾಡುವ ಮೊದಲು ಪ್ರೋತ್ಸಾಹಧನ ನೀಡುವ ಉದ್ದೇಶದಿಂದ ಯೋಜನೆಯನ್ನು ಜಾರಿಗೆ ತರಲಾಗಿದೆ ಮತ್ತು ಮೇಲೆ ಓದಲಾದ ಕ್ರಮ ಸಂಖ್ಯೆ **(2)** ರ ಆದೇಶದಲ್ಲಿ ಕಾನೂನು ಪದವೀಧರರಿಗೆ ನೀಡುವ ಪ್ರೋತ್ಸಾಹಧನವನ್ನು ರೂ. 1,000/- ಗಳಿಂದ ರೂ. 2,000/- ಗಳಿಗೆ ಹೆಚ್ಚಿಸಲಾಗಿರುತ್ತದೆ.

Circulate

ಮೇಲೆ ಓದಲಾದ ಕ್ರಮ ಸಂಖ್ಯೆ **(3)** ರ ಆದೇಶದಲ್ಲಿ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯವನ್ನು ತ್ವರಿತವಾಗಿ ತಲುಪಿಸುವ ಉದ್ದೇಶದಿಂದ ಈ ಹಿಂದೆ ಜಾರಿಯಲ್ಲಿದ್ದ ಎರಡು ಹಂತಗಳ ಆಯ್ಕೆ ಸಮಿತಿಯನ್ನು ಅಂದರೆ ಜಿಲ್ಲಾ ಹಂತದಲ್ಲಿದ್ದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಮತ್ತು ತಾಲ್ಲೂಕು ಹಂತದಲ್ಲಿದ್ದ ತಹಶೀಲ್ದಾರ್ ರವರ ಅಧ್ಯಕ್ಷತೆಯ ಆಯ್ಕೆ ಸಮಿತಿಗಳನ್ನು ಬದಲಾಯಿಸಿ ಜಿಲ್ಲಾ ಹಂತದಲ್ಲಿಯೇ ವ್ಯಾಪಕವಾದ ಒಂದೇ ಆಯ್ಕೆ ಸಮಿತಿಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ **(4) ರಿಂದ (8) ರವರೆಗೆ ಮತ್ತು (10)** ರಲ್ಲಿನ ಆದೇಶಗಳಲ್ಲಿ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನಾ ಕಾರ್ಯಕ್ರಮವನ್ನು ಆಯಾ ವರ್ಷಗಳಲ್ಲಿ ಅಂದರೆ ಕ್ರಮವಾಗಿ 2017-18, 2018-19, 2019-20, 2020-21, 2021-22 & 2022-23ನೇ ಸಾಲುಗಳಲ್ಲಿ ಮುಂದುವರೆಸಿ, ಆಯಾ ಜಿಲ್ಲಾ ಹಂತದಲ್ಲಿ ಜಿಲ್ಲಾ ಆಯ್ಕೆ ಸಮಿತಿಯಿಂದ ಅರ್ಹ ಫಲಾನುಭವಿಗಳನ್ನು ಆಯ್ಕೆಗೊಳಿಸಿ ಆಯ್ಕೆ ಪಟ್ಟಿಯನ್ನು ಒದಗಿಸುವಂತೆ ಆದೇಶಿಸಲಾಗಿದೆ.

DISTRICT ... UDUPI

ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ಪಾವತಿ ಯೋಜನೆಯು ಫಲಾನುಭವಿ ಯೋಜನೆಯಾಗಿದ್ದು, ಸರ್ಕಾರದ ಸೇವೆಗಳು, ಸೌಲಭ್ಯಗಳು ಹಾಗೂ ಸಬ್ಸಿಡಿಗಳ ವಿತರಣೆ ಪ್ರಕ್ರಿಯೆಯು ಸರಳೀಕೃತವಾಗಲು, ಪಾರದರ್ಶಕತೆ ಮತ್ತು ದಕ್ಷತೆ ಹೆಚ್ಚಿ, ಫಲಾನುಭವಿಗಳು ತಮ್ಮ ಅರ್ಹತೆಯ ಸೌಲಭ್ಯವನ್ನು ಸರಳವಾಗಿ ಹಾಗೂ ಯಾವುದೇ ಅಡೆತಡೆಯಿಲ್ಲದೆ ಪಡೆಯಲು ಅನುವಾಗುವಂತೆ, ಅಲ್ಲದೆ ತಮ್ಮ ಗುರುತನ್ನು ಖಚಿತ ಪಡಿಸಲು ಬಹುಸಂಖ್ಯೆಯ ದಾಖಲೆಗಳನ್ನು ಸಲ್ಲಿಸುವ ಅವಶ್ಯಕತೆಯನ್ನು ತಡೆಯಲು ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ಯೋಜನೆಯನ್ನು ಆಧಾರ್ (ಹಣಕಾಸು ಮತ್ತು ಇತರ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಕಾಯ್ದೆ, 2016 (18ರ 2016) ಸೆಕ್ಷನ್ 7 ರ ಅನುಸಾರ ಮೇಲೆ ಓದಲಾದ ಕ್ರಮ ಸಂಖ್ಯೆ **(9)** ರಲ್ಲಿ ಅಧಿಸೂಚಿಸಲಾಗಿದೆ. ಇನ್ನು ಮುಂದೆ ಸದರಿ ಯೋಜನೆಯಡಿ ಬಿಡುಗಡೆ ಮಾಡುವ ಅನುದಾನವನ್ನು

ಪು.ತಿ.ನೋ...

Direct Benefit Transfer (DBT) ಪೋರ್ಟಲ್‌ನಲ್ಲಿ ಫಲಾನುಭವಿಗಳ ಮಾಹಿತಿ ನೋಂದಾಯಿಸಿದ ನಂತರ, ಖಜಾನೆ-2ರ ಮುಖಾಂತರ ಫಲಾನುಭವಿಗಳಿಗೆ ಪ್ರೋತ್ಸಾಹಧನ ಪಾವತಿಸಲು ಕ್ರಮವಹಿಸಲು ಸೂಚಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ **(11)** ರಲ್ಲಿನ ಆದೇಶದಲ್ಲಿ ಕಾನೂನು ಇಲಾಖೆಗಳಲ್ಲಿನ ಯೋಜನೆಗಳ ಅನುಷ್ಠಾನ ಸಂಬಂಧ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನಾ ಕಾರ್ಯಕ್ರಮವನ್ನು **2023-24ನೇ** ಸಾಲಿನಲ್ಲಿ ಮುಂದುವರೆಸಿ ಆದೇಶಿಸಲಾಗಿದೆ.

ಪ್ರಸ್ತುತ ರಾಜ್ಯದಲ್ಲಿ ಕಾನೂನು ಪದವಿಯನ್ನು ಪಡೆದು ವಕೀಲರ ವೃತ್ತಿಯನ್ನು ಆರಂಭಿಸುವ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ವಿತರಿಸುವ ಸಲುವಾಗಿ 2023-24ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ "2014-00-102-0-06-117 - (ಕಾನೂನು ಪದವೀಧರರಿಗೆ ಶಿಷ್ಯ ವೇತನ ಮತ್ತು ಪ್ರೋತ್ಸಾಹಧನ)" ಅಡಿಯಲ್ಲಿ ಒಟ್ಟು ರೂ. 200.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. 2023-24ನೇ ಸಾಲಿನ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ಯೋಜನೆಯಡಿ ದಿನಾಂಕ 08-09-2016ರ ಆದೇಶದನ್ವಯ ರಚಿತವಾದ ಜಿಲ್ಲಾ ಹಂತದ ಆಯ್ಕೆ ಸಮಿತಿಗಳು ಈ ಯೋಜನೆಗೆ ಜಿಲ್ಲಾವಾರು ಫಲಾನುಭವಿಗಳನ್ನು ಆಯ್ಕೆ ಮಾಡಿ, ಆಯ್ಕೆ ಪಟ್ಟಿಯಲ್ಲಿರುವಂತೆ ಆಯಾ ಜಿಲ್ಲೆಗಳಿಗೆ ಅನುದಾನ ಅಗತ್ಯತೆಯನುಸಾರ ಬಿಡುಗಡೆಗೊಳಿಸಲು ಪರಿಶೀಲಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯಡಿ ಆಯಾ ಜಿಲ್ಲಾ ಹಂತದಲ್ಲಿ ಜಿಲ್ಲಾ ಆಯ್ಕೆ ಸಮಿತಿಯಿಂದ ಅರ್ಹ ಫಲಾನುಭವಿಗಳನ್ನು ಆಯ್ಕೆಗೊಳಿಸಿ ಆಯ್ಕೆಪಟ್ಟಿ ಸಲ್ಲಿಸುವ ಪ್ರಸ್ತಾವನೆ ಬಗ್ಗೆ ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಎಡಿ/478/2023,**
**ಬೆಂಗಳೂರು, ದಿನಾಂಕ : 01-12-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಕಾನೂನು ಪದವಿಯನ್ನು ಪಡೆದು ವಕೀಲಿ ವೃತ್ತಿಯನ್ನು ಆರಂಭಿಸುವ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ವಿತರಿಸುವ ಸಲುವಾಗಿ **ಲೆಕ್ಕ ಶೀರ್ಷಿಕೆ "2014-00-102-0-06-117 - (ಕಾನೂನು ಪದವೀಧರರಿಗೆ ಶಿಷ್ಯ ವೇತನ ಮತ್ತು ಪ್ರೋತ್ಸಾಹಧನ)"** ಅಡಿಯಲ್ಲಿ ಆಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನವನ್ನುಆಯಾ ಜಿಲ್ಲಾವಾರು ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯಡಿ ಆಯ್ಕೆಗೊಂಡ ಅಭ್ಯರ್ಥಿಗಳ ಪಟ್ಟಿಯನ್ನಾಧರಿಸಿ ಜಿಲ್ಲಾವಾರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರಿಗೆ ಅಗತ್ಯ ಅನುದಾನವನ್ನು ಆಯ್ಕೆ ಪಟ್ಟಿ ಪಡೆದ ನಂತರ ಬಿಡುಗಡೆಗೊಳಿಸಲಾಗುವುದು.

ಪ್ರಸ್ತುತ, **2023-24ನೇ** ಸಾಲಿಗೆ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯಡಿ ರಾಜ್ಯಾದ್ಯಂತ ಏಕಕಾಲಕ್ಕೆ ಲಗತ್ತಿಸಿರುವ ವೇಳಾಪಟ್ಟಿಯನ್ವಯ ಅರ್ಜಿ ಆಹ್ವಾನಿಸಿ, ಅರ್ಜಿಗಳ ಪರಿಶೀಲನೆ ಕಾರ್ಯ, ಆಯ್ಕೆ ಸಮಿತಿ ಸಭೆಯ ಮುಖಾಂತರ ಆಯ್ಕೆಗೊಂಡ ಅಭ್ಯರ್ಥಿಗಳ ವಿವರಗಳನ್ನು ಈ ಕೆಳಕಂಡ ನಮೂನೆಯಲ್ಲಿ ಒದಗಿಸಲು ತಿಳಿಸಿದೆ.

2023-24ನೇ ಸಾಲಿಗೆ ಕಾನೂನು ಇಲಾಖೆಯಿಂದ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಗೆ ಆಯ್ಕೆಗೊಂಡವರ ವಿವರ :

**ಜಿಲ್ಲೆ:**

| ಕ್ರಮ ಸಂಖ್ಯೆ | ಆಯ್ಕೆಗೊಂಡ ಅಭ್ಯರ್ಥಿಯ ಹೆಸರು | ವಿಳಾಸ | ನೋಂದಣಿಯಾದ ತಾಲ್ಲೂಕು/ಜಿಲ್ಲಾ ವಕೀಲರ ಸಂಘ | ಪುರುಷ/ ಮಹಿಳಾ ಅಭ್ಯರ್ಥಿ | ಷರಾ |
|---|---|---|---|---|---|
| | | | | | |

ದಿನಾಂಕ :
ಸ್ಥಳ :

ಆಯ್ಕೆ ಸಮಿತಿಯ ಅಧ್ಯಕ್ಷರು /
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

.... 3

ಆಯ್ಕೆ ಪ್ರಕ್ರಿಯೆಗೆ ಈ ಕೆಳಕಂಡ ಷರತ್ತು / ಮಾರ್ಗಸೂಚಿಗಳನುಸಾರ ಆಯ್ಕೆ ಮಾಡಿ, ಸರ್ಕಾರಕ್ಕೆ ಆಯ್ಕೆ ಪಟ್ಟಿಯನ್ನು ನಿಗದಿಪಡಿಸಿದ ನಮೂನೆಯಲ್ಲಿ ಕಾಲಾನುಕ್ರಮದಲ್ಲಿ ಒದಗಿಸಲು ಈ ಮೂಲಕ ತಿಳಿಸಲಾಗಿರುತ್ತದೆ.

1) ಈ ಯೋಜನೆಯು 2023-24ನೇ ಸಾಲಿನದ್ದಾಗಿ ಅನುಷ್ಠಾನಗೊಳ್ಳುತ್ತಿದ್ದು, ಈ ಯೋಜನೆಯಡಿ ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಡಿಯಲ್ಲಿ **<u>ದಿನಾಂಕ 01-06-2022 ರಿಂದ 31-05-2023 ರವರೆಗಿನ</u>** ಅವಧಿಯಲ್ಲಿ ವಕೀಲ ವೃತ್ತಿಗೆ ನೋಂದಾಯಿಸಿದವರಿಗೆ ಅನ್ವಯವಾಗತಕ್ಕದ್ದು.

2) ಈ ಯೋಜನೆಯಡಿಯಲ್ಲಿ ಪ್ರೋತ್ಸಾಹಧನದ ಮೊತ್ತ ಪ್ರತಿ ಮಾಹೆಗೆ ರೂ. 2,000/- (ಎರಡು ಸಾವಿರ ರೂಪಾಯಿಗಳು)ಗಳು ಒಟ್ಟು 24 ತಿಂಗಳುಗಳ ಅವಧಿಗೆ ಸೀಮಿತವಾಗಿರತಕ್ಕದ್ದು.

3) ಸರ್ಕಾರಿ, ಅರೆ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ ವಯೋ ನಿವೃತ್ತಿ, ಕಡ್ಡಾಯ ನಿವೃತ್ತಿ ಮತ್ತು ಸ್ವ-ಇಚ್ಛಾ ನಿವೃತ್ತಿ ಹೊಂದಿದ ನಂತರ ವಕೀಲ ವೃತ್ತಿ ನಡೆಸಲು ಇಚ್ಛಿಸುವ ಕಾನೂನು ಪದವೀಧರರಿಗೆ ಈ ಯೋಜನೆ ಅನ್ವಯವಾಗತಕ್ಕದಲ್ಲ ಮತ್ತು ಅಂತಹ ಯಾವುದೇ ಸೇವೆಯಿಂದ ತೆಗೆದು ಹಾಕಲ್ಪಟ್ಟ ಕಾನೂನು ಪದವೀಧರರಿಗೆ ಸಹ ಅನ್ವಯವಾಗತಕ್ಕದ್ದಲ್ಲ.

4) ಈ ಯೋಜನೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯ/ಕುಟುಂಬದ ವಾರ್ಷಿಕ ವರಮಾನದ ಮಿತಿಯು ರೂ. 40,000/- (ನಲವತ್ತು ಸಾವಿರ ರೂಪಾಯಿಗಳು) ಗಳನ್ನು ಮೀರತಕ್ಕದ್ದಲ್ಲ.

5) ಇಂತಹದೇ ಸೌಲಭ್ಯವನ್ನು ಈ ಯೋಜನೆ / ಇತರೆ ಯೋಜನೆಯಡಿ ಅಥವಾ ರಾಜ್ಯ ಸರ್ಕಾರದ ಬೇರೆ ಯಾವುದೇ ಇಲಾಖೆಯ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಈ ಯೋಜನೆಯ ಸೌಲಭ್ಯಗಳಿಗೆ ಅರ್ಹರಾಗತಕ್ಕದ್ದಲ್ಲ.

6) ಹೊಸದಾಗಿ ವಕೀಲರ ವೃತ್ತಿಯಲ್ಲಿ ತೊಡಗುವ ಕಾನೂನು ಪದವೀಧರರು ರಾಜ್ಯ ಬಾರ್ ಕೌನ್ಸಿಲ್‌ನಲ್ಲಿ ನೋಂದಾಯಿಸಿದ ನಂತರ ಸ್ಥಳೀಯ ಸಂಬಂಧಿತ ತಾಲ್ಲೂಕಿನ ಹಿರಿಯ ನ್ಯಾಯಾಧೀಶರುಗಳ ಮುಖಾಂತರ ಮತ್ತು ಜಿಲ್ಲಾ ಹಂತದಲ್ಲಿ ಅರ್ಹ ಕಾನೂನು ಪದವೀಧರರು ನೇರವಾಗಿ ಸಮಿತಿಯ ಅಧ್ಯಕ್ಷರಿಗೆ ವಿಳಾಸಿಸಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಸದರಿ ಆಯ್ಕೆ ಸಮಿತಿಯು ಸಭೆ ಸೇರಿ ನಿಯಮಗಳನುಸಾರ ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಮತ್ತು **ಈ ಫಲಾನುಭವಿಗಳಿಗೆ ಪ್ರೋತ್ಸಾಹಧನವನ್ನು DBT (Direct Benefit Transfer) ಪೋರ್ಟಲ್‌ನಲ್ಲಿ ನೋಂದಾಯಿಸಿ, ಖಜಾನೆ-2ರ ಮುಖಾಂತರ ಅನುದಾನ ಬಿಡುಗಡೆಗೊಳಿಸುವುದು.**

7) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಅವರ ಜಿಲ್ಲೆಯ ವ್ಯಾಪ್ತಿಗೆ ಬರುವ ತಾಲ್ಲೂಕುಗಳಲ್ಲಿ ಆಗಿರುವ ಪ್ರಗತಿ ಕುರಿತಂತೆ ಪ್ರತಿ ತಿಂಗಳಿಗೊಮ್ಮೆ ವಿವರಗಳನ್ನೊಳಗೊಂಡ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

8) ಅಧ್ಯಕ್ಷರು, ಜಿಲ್ಲಾ ವಕೀಲರ ಸಂಘ ಹಾಗೂ ತಾಲ್ಲೂಕು ವಕೀಲರುಗಳ ಸಂಘದ ಅಧ್ಯಕ್ಷರು ಇವರುಗಳು ಈ ಯೋಜನೆಯ ಲಾಭವನ್ನು ಸಂಪೂರ್ಣವಾಗಿ ಅರ್ಹ ಫಲಾನುಭವಿಗಳಿಗೆ ತಲುಪಿಸಲು ಯೋಜನೆಯ ಅನುಷ್ಠಾನದಲ್ಲಿ ಪಾಲ್ಗೊಳ್ಳುವುದು.

9) ಈ ಯೋಜನೆಯ ಅನುಷ್ಠಾನಕ್ಕಾಗಿ ತಯಾರಿಸಿ ಲಗತ್ತಿಸಿರುವ ವೇಳಾಪಟ್ಟಿ (ಅನುಬಂಧ-2) ರನ್ವಯ ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳಲ್ಲಿ ಏಕರೂಪವಾಗಿ ಮತ್ತು ನಿಗದಿಪಡಿಸಿದ ಕಾಲಾವಧಿಯಲ್ಲಿ ಜಾರಿಗೊಳಿಸುವುದು.

ಈ ಯೋಜನೆಯನ್ನು ಪ್ರತಿ ಜಿಲ್ಲೆಯಲ್ಲಿ ಲಭ್ಯವಿರುವ ಎಲ್ಲಾ ಅರ್ಹ ಅಭ್ಯರ್ಥಿಗಳನ್ನು ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸುವ ಸರ್ಕಾರದ ಆದೇಶದಲ್ಲಿನ ಮಾರ್ಗಸೂಚಿ / ಷರತ್ತುಗಳನ್ವಯ ಆಯ್ಕೆಗೊಳಿಸಿ ಸರ್ಕಾರದ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಶ್ರಮಿಸುವಂತೆ ಆಯಾ ಜಿಲ್ಲೆಯ ಜಿಲ್ಲಾ ಆಯ್ಕೆ ಸಮಿತಿಯ ಅಧ್ಯಕ್ಷರುಗಳಾದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳಿಗೆ ಈ ಮೂಲಕ ತಿಳಿಸಲಾಗಿದೆ.

....... 4

ಈ ಆದೇಶವನ್ನು **ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 7 ಟಿಎಫ್‌ಪಿ 2023, ದಿನಾಂಕ : 31.07.2023 ರನ್ವಯ** ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವನಿತ ಹೆಚ್. )
ಸರ್ಕಾರದ ಉಪ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು ಮಾನವ
ಹಕ್ಕುಗಳ ಇಲಾಖೆ (ಆಡಳಿತ-2)

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು (ಮುಖ ಪತ್ರದೊಂದಿಗೆ) – ಮುಂದಿನ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.

**ಇವರಿಗೆ :**

1. ಮಹಾಲೇಖಪಾಲರು (ಎ&ಇ, ಲೆಕ್ಕ ಪರಿಶೋಧನೆ-1 & 2) ಕರ್ನಾಟಕ, ಬೆಂಗಳೂರು.
2. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.
3. ಅಡ್ವೋಕೇಟ್ ಜನರಲ್, ಕರ್ನಾಟಕ ಉಚ್ಛ ನ್ಯಾಯಾಲಯ ಕಟ್ಟಡ, ಬೆಂಗಳೂರು-01
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ/ಸಮಾಜ ಕಲ್ಯಾಣ ಇಲಾಖೆ/ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ / ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
5. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
6. ಎಲ್ಲಾ ಜಿಲ್ಲೆಗಳ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳು**(ನೋಂದಾಯಿತ ಅಂಚೆ ಮೂಲಕ)**.
7. ಉಪ ನಿರ್ದೇಶಕರು, ಖಜಾನೆ ಇಲಾಖೆ, ನೆಟ್‌ವರ್ಕ್ ಮ್ಯಾನೇಜಮೆಂಟ್ ಸೆಂಟರ್, ಎರಡನೇ ಮಹಡಿ, ದಕ್ಷಿಣ ಬ್ಲಾಕ್, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
8. ನಿರ್ದೇಶಕರು, ಯೋಜನಾ ಇಲಾಖೆ (ಸಂಪೂರ್ಣ ಯೋಜನೆ), ಬಹುಮಡಿಗಳ ಕಟ್ಟಡ, ಬೆಂಗಳೂರು.
9. ಅಧ್ಯಕ್ಷರು, ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಹಳೆಯ ಚುನಾವಣಾ ಆಯೋಗ ಕಛೇರಿ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು ( ಈ ಆದೇಶವನ್ನು ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ವಕೀಲರ ಸಂಘಗಳಿಗೆ ಸುತ್ತೋಲೆ ಮೂಲಕ ತಲುಪಿಸುವಂತೆ ಕೋರಿದೆ).
10. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ-10.

# ಅನುಬಂಧ-1

## ಕರ್ನಾಟಕ ಸರ್ಕಾರದ ಕಾನೂನು ಇಲಾಖೆಯಡಿಯಲ್ಲಿ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯ ನಮೂನೆ

| | | |
|---|---|---|
| 1) | **ಅರ್ಜಿದಾರರ ಹೆಸರು :** (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ) | |
| 2) | **ಅರ್ಜಿದಾರರ ತಂದೆ / ಗಂಡನ ಹೆಸರು :** (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ) | |
| 3) | **ಹುಟ್ಟಿದ ದಿನಾಂಕ :** (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ) | |
| 4) | **ವಿಳಾಸ ಪ್ರಸ್ತುತ :**<br><br>ಖಾಯಂ ವಿಳಾಸ :<br><br>ಕಛೇರಿ ವಿಳಾಸ: | |
| 5) | **ವಿವಾಹಿತರೇ?** | |
| 6) | **ಭಾರತೀಯ ಪ್ರಜೆಯೇ?** | |
| 7) | **ಧರ್ಮ** | |
| 8) | **ಜಾತಿ & ಪ್ರವರ್ಗ** | |
| 9) | **ಶೈಕ್ಷಣಿಕ ವಿದ್ಯಾರ್ಹತೆಗಳು:** | |

| **ಕ್ರ. ಸಂ.** | **ತೇರ್ಗಡೆಗೊಂಡ ವಿದ್ಯಾರ್ಹತೆ** | **ವರ್ಷ** | **ಶೇಕಡಾ ಅಂಕ** | **ಪ್ರಮಾಣ ಪತ್ರದ ಪ್ರತಿ ಲಗತ್ತಿಸುವುದು** |
|---|---|---|---|---|
| 1 | ಎಸ್.ಎಸ್.ಎಲ್.ಸಿ. ($10^{th}$) | | | |
| 2 | ಪಿ.ಯು.ಸಿ. (12 th) | | | |
| 3 | ಪದವಿ | | | |
| 4 | ಕಾನೂನು ಪದವಿ | | | |

| | | |
|---|---|---|
| 10) | **ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ನೋಂದಾಯಿಸಿದ ಸಂಖ್ಯೆ ಮತ್ತು ದಿನಾಂಕ :(ಸಂಬಂಧಿತ ದಾಖಲೆಯ ಪ್ರತಿ)** | |
| 11) | **ಪ್ರಸ್ತುತ ವಕೀಲ ವೃತ್ತಿ ನಡೆಸುತ್ತಿದ್ದಲ್ಲಿ ವಿವರ:(ಸಂಬಂಧಿತ ದಾಖಲೆಯ ಪ್ರತಿ)** | |
| 12) | **ಇತರೆ ಮಾಹಿತಿ:** | |

**ಲಾ-ಎಲ್‌ಎಡಿ/478/2023**

ಮೇಲಿನ ನಮೂನೆಯಲ್ಲಿ ನೀಡಲಾಗಿರುವ ಮಾಹಿತಿಯನ್ನು ನಾನು ಪ್ರಜ್ಞಾಪೂರ್ವಕವಾಗಿ ಸತ್ಯವೆಂದು ಅರಿತು ನೀಡಿರುತ್ತೇನೆ. ಒಂದು ವೇಳೆ ಈ ಮಾಹಿತಿಯಲ್ಲಿ ಯಾವುದೇ ಅಂಶಗಳು ಸತ್ಯಾಂಶದಿಂದ ಕೂಡಿಲ್ಲವೆಂದು ತಿಳಿದು ಬಂದಲ್ಲಿ ಆಯ್ಕೆ ಪ್ರಾಧಿಕಾರವು / ಸರ್ಕಾರವು ನಿಯಮಾನುಸಾರ ನನ್ನ ಮೇಲೆ ಅವಶ್ಯಕ ಕಾನೂನು ಕ್ರಮ ಜರುಗಿಸಬಹುದೆಂದು ನಾನು ಒಪ್ಪಿಗೆಯನ್ನು ಈ ಮೂಲಕ ನೀಡಿರುತ್ತೇನೆ.

**ಅರ್ಜಿದಾರರ ಸಹಿ**

**(ಹೆಸರು)**

# ಅನುಬಂಧ-2

## 2023-24ನೇ ಸಾಲಿಗೆ ನವ ಕಾನೂನು ಪದವೀಧರರಿಗೆ ಕಾನೂನು ಇಲಾಖೆಯಿಂದ ನೀಡಲಾಗುವ ಪ್ರೋತ್ಸಾಹಧನ ಯೋಜನೆಯ ಅನುಷ್ಠಾನದ ವೇಳಾಪಟ್ಟಿ (ಲಾ - ಎಲ್ಎಡಿ/478/2023)

| ಕ್ರಮ ಸಂಖ್ಯೆ | ಯೋಜನೆ ಅನುಷ್ಠಾನದ ವಿಷಯ | ನಿಗಧಿಪಡಿಸಿದ ಅವಧಿ |
|---|---|---|
| 1 | ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | 13-12-2023 |
| 2 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 12-01-2024 |
| 3 | ಅರ್ಜಿಗಳ ಪರಿಶೀಲನೆಗೊಂಡು ಆಯ್ಕೆ ಸಮಿತಿಗೆ ಸಲ್ಲಿಸಲು ಪಟ್ಟಿ ತಯಾರಿಗೊಳಿಸಬೇಕಾದ ಅವಧಿ | 16-01-2024 ರಿಂದ 22-01-2024 |
| 4 | ಆಯ್ಕೆ ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡಲು ಸಂಬಂಧಿತ (ತಾಲ್ಲೂಕುವಾರು) ಸಭೆ ನಡೆಸಬೇಕಾದ ಅವಧಿ ಮತ್ತು ಆಯ್ಕೆ ಪಟ್ಟಿ ತಯಾರಿಸುವ ಅವಧಿ. | 01-02-2024 ರಿಂದ 15-02-2024 ರವರೆಗೆ |
| 5 | ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವ ಅವಧಿ ಜಿಲ್ಲಾ ಆಯ್ಕೆ ಸಮಿತಿಯಿಂದ ಈ ಯೋಜನೆಯ ಅನುಷ್ಠಾನದ ಫಲಾನುಭವಿಗಳ ಪಟ್ಟಿಯ ವಿವರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಇರುವ ಅವಧಿ | 16-02-2024 ರಿಂದ 29-02-2024 ರವರೆಗೆ |
| 6 | ಸರ್ಕಾರದಲ್ಲಿ ಎಲ್ಲಾ ಜಿಲ್ಲಾ ಆಯ್ಕೆ ಸಮಿತಿಗಳಿಂದ ಸ್ವೀಕೃತಗೊಂಡ ಯೋಜನಾ ಅನುಷ್ಠಾನದ ವರದಿಗಳನ್ನು ಕ್ರೂಢೀಕರಿಸುವ ಅವಧಿ ಮತ್ತು ಅನುದಾನ ಬಿಡುಗಡೆಗೊಳಿಸುವ ಅವಧಿ-ಜಿಲ್ಲಾವಾರು | 04-03-2024 ರಿಂದ 16-03-2024 ರವರೆಗೆ |

(ವನಿತ ಹೆಚ್.)

ಸರ್ಕಾರದ ಉಪ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು ಮಾನವ
ಹಕ್ಕುಗಳ ಇಲಾಖೆ (ಆಡಳಿತ-2)

## ಅನುಬಂಧ-3

## Details of Law Graduates (Beneficiaries) applied during the year 2023-24

| | |
|---|---|
| District | |
| Taluk | |
| Beneficiary Name (Eng) | |
| Beneficiary Name (Kan) | |
| Beneficiary Address (Eng) | |
| Beneficiary Address (Kan) | |
| DOB DD/MM/YEAR | |
| Gender | |
| Bank Details: Name of the Bank & Branch | |
| IFSC Code | |
| Bank Account Number | |
| Mobile No. | |
| Aadhaar Number | |

- **Note : The Beneficiary details should be provided as per Aadhaar Card**